ಕಲಾ ಕೋರ್ಸ್‌ನಲ್ಲಿ ವಿಷಯಗಳ ಸಮೂಹಗೊಳಿಸುವಿಕೆ

1370(1348); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ರಾಯಬಾಗ ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಲಾ ಕೋರ್ಸಿನ ವಿಭಾಗದಲ್ಲಿ ಇತಿಹಾಸ, ಇಂಗ್ಲೀಷ್, ಸಮಾಜಶಾಸ್ತ್ರ, ಕನ್ನಡ, ರಾಜ್ಯಶಾಸ್ತ್ರ ವಿಷಯಗಳು ಇರುವಂತೆ ಪಿ.ಸಿ.ಎಂ. ಹಾಗೂ ಬಿ.ಬಿ.ಝಡ್ ವಿಷಯಗಳನ್ನು ಸಮೂಹಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ದಿನದಲ್ಲಿ ಮಂಜೂರಾತಿ ನೀಡಿ ಸಮೂಹಗೊಳಿಸಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು)

ಅ) **ಮತ್ತು ಆ)** ರಾಯಬಾಗ ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಲಾ ಕೋರ್ಸಿನ ವಿಭಾಗದಲ್ಲಿ ಇತಿಹಾಸ, ಇಂಗ್ಲೀಷ್, ಸಮಾಜಶಾಸ್ತ್ರ, ಕನ್ನಡ, ರಾಜ್ಯಶಾಸ್ತ್ರ ವಿಷಯಗಳು ಇರುವಂತೆ ಪಿ.ಸಿ.ಎಂ. ಹಾಗೂ ಬಿ.ಬಿ.ಝಡ್ ವಿಷಯಗಳನ್ನು ಸಮೂಹಗೊಳಿಸುವ ಪ್ರಸ್ತಾವನೆಗೆ ದಿನಾಂಕ: 03–07–2015 ರಂದು ಅನುಮತಿ ನೀಡಲಾಗಿರುತ್ತದೆ.

ಶಾಸಕರ ಮಾದರಿ ಶಾಲೆ

1371(1349); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಬಾಗ)

ಅ) ರಾಯಬಾಗ ತಾಲ್ಲೂಕಿನ ರಾಯಬಾಗ ಗ್ರಾಮದ ಕೇಂದ್ರ ಶಾಲೆಯನ್ನು ಶಾಸಕರ ಮಾದರಿ ಶಾಲೆಯಾಗಿ ಪರಿವರ್ತಿಸುವ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು;

ಇ) ಯಾವಾಗ ಪರಿವರ್ತನೆಗೆ ಮಂಜೂರಾತಿ ನೀಡಲಾಗುವುದು?